ಫ್ರೆಂಡ್ಸು ನನ್ನನ್ನೇ ಕಾಯುತ್ತಿರುವರು. ಸಿನಿಮಾ ಟಾಕೀಸಿನ ಕಡೆ ಮೆರವಣಿಗೆ ಎತ್ತಿ ಅಲ್ಲಿ ತೆಂಗಿನ ಮರದೆತ್ತರದ ಅಣ್ಣಾ ಸಾರ್ ಕತ್ತಿಗೆ ಹತ್ತು ಮಾರಿನ ಹಾರ ಹಾಕಿ ಹಾಲು, ಜೇನು ಸುರಿದು ಗಂಧದಕಡ್ಡಿ ಹಚ್ಚಿ, ಆನೆ ಮದ್ದಿನ ಪಟಾಕಿ ಸಿಡಿಸಬೇಕು' ಎಂದು ಬೇರ‍್ಯಾವ ನೆದರೂ ಇಲ್ಲದೆ, ದಿಕ್ಕು ತಪ್ಪಿದವನಂತೆ ಓಡಿಬಿಡುತ್ತಿದ್ದ. ಅದಾಗ ಕಣ್ಣಾಸೆಲ್ವಿ ಅಂಥ ಸಂಭ್ರಮದಲ್ಲಿ ಪಳನಿಯೊಂದಿಗೆ ಭಾಗವಹಿಸಲು ತನಗೆ ಆಗುತ್ತಿಲ್ಲವಲ್ಲ ಅಂದು ವ್ಯಥೆಯಾಗುವಳು. ಇಂಥ ತನ್ನ ಪ್ರೀತಿಪಾತ್ರ ಕಾದಲನ ಕುಣಿತದ ವೈಖರಿಯನ್ನು ಆಗಾಗ ಅವ್ವ ತಿರುಮೊಳಿಯೊಡನೆ ಮನದುಂಬಿ ಪ್ರಸ್ತಾಪಿಸಿ, ಅವನು ಇನ್ನೇನು ಮದರಾಸಿಗೆ ಹೋಗಿ ಕೋಟ್ಯಧಿಪತಿಯಾಗುವ ಸಾಧ್ಯತೆ ಇದೆಯೆನ್ನುತ್ತಿದ್ದಳು.

ಲಾರಿ ಡ್ರೈವರ್ ತಂಗಮಣಿ ಗಂಡನ ದೇಶ ಸಂಚಾರ ಮತ್ತು ವಯಸ್ಸಾಗುವ ಮೊದಲೇ ಅವನು ಮುದುಕನಾಗುತ್ತಿದ್ದುದೇ ಅಲ್ಲದೆ ಆ ಗಂಡನ ಹೆಚ್ಚು ಸಂಪರ್ಕವೇ ಇಲ್ಲದಂತಾಗಿ ಇತ್ತ ಸ್ಮಶಾನದಲ್ಲಿ ಸಾಯುವವರಿಗೆಲ್ಲ ಗುಳಿ ತೋಡುತ್ತಿದ್ದ ತಿರುಮೊಳಿಗೆ ಇಡಿ ಪುರುಷ ಕುಲದ ಮೇಲೆಯೇ ಅಪಾರ ದ್ವೇಷವಿದ್ದು, ಯಾವಾಗ ಮಗಳು ಚಿನ್ನಪಳನಿ ಎಂಬ ಅಪರಿಚಿತನನ್ನು ಮನವಾರೆ ಹೊಗಳತೊಡಗಿದಳೋ ಸಿಟ್ಟು ಹತ್ತಿ, 'ಮದರಾಸಾ, ಬುಂಬಾಯಿ? ಅವ್ನ ಎಂದ ಮಸಾಣತ್ತಕ್ಕಾನ ಪೊಗಟ್ಟುಂ, ವುನಕ್ಕೇದಡಿ ಅಂದ ವೊಂಬು, ವಾಯ ಮೂಡಿ ಚುಮ್ಮಾ ಇರಡಿ' ಎಂದು ಮಗಳ ಪ್ರೇಮ ಪ್ರಸ್ತಾವನೆಗೆ ಗುಂಡಿ ತೋಡಿ ಮಣ್ಣು ಹಾಕಿ ಮುಚ್ಚಿದಳು.

ಇತ್ತ ಶಾಲೆ ಬಿಟ್ಟು ಅತ್ತ ಬೀದಿ ಬೀದಿಗಳಲ್ಲಿ, ಸ್ಮಶಾನದೊಳಗೆ ಹೆಣದ ಮುಂದೆ ಕುಣಿಯುತ್ತಿದ್ದ ಮಗನನ್ನೂ ಅವನ ಸಿನಿಮಾ, ಬಂಗಲೆ, ಕೋಟಿಗಟ್ಟಲೆ ಕಾಸಿನ ಕನಸನ್ನೂ ತಿರುತಿರುಗಿ ಕೇಳುತ್ತಿದ್ದ ಮೇಸ್ತ್ರಿ ಅಪ್ಪನು, 'ಯಲಾ ಕಂಡರೋಳಿ ಮಗನೇ, ನಿನ್ನ ಕತ್ತಿನ ಚೆಂಡು ಹಿಡಿದು ಚರಂಡಿಗೆ ಮುಳುಗಿಸಿ ಕೊನ್ನುಪುಡುವೆ' ಎಂದು ಗದ್ದಲವೆಬ್ಬಿಸಲು ಪಳನಿ ಮತ್ತು ಸ್ಮಶಾನ ನಿವಾಸಿಯಾದ ತಿರುಮೊಳಿಯ ಪುತ್ರಿ ಕಣ್ಣಾಸೆಲ್ವಿಯ ಪ್ರೇಮ ವಿಚಾರ ಕಂಡೂ ಕಾಣದಂತೆ ವಿವಾಹ ಪ್ರಸ್ತಾಪಕ್ಕೇ ಬರುವಂತಾಗಿಬಿಟ್ಟಿತು.

ಹೆಣದ ಮೆರವಣಿಗೆಯ ಮುಂದೆ ಬರುತ್ತಿದ್ದ ಜನ ದುಃಖಿಸುತ್ತ, ಅಳುತ್ತ ಸ್ಮಶಾನದ ತಗಡು ಷೀಟಿನ ಬಾತ್‌ರೂಮುಗಳಲ್ಲಿ ಮೈ ತೋಯಿಸಿಕೊಂಡು ಹೋಗುತ್ತಿದ್ದರಲ್ಲಾ ಅಲ್ಲೇ ಪಳನಿಯೂ ತಲೆ ಮೇಲೆ ತಣ್ಣೀರು ಸುರಿದುಕೊಳ್ಳುವವನಂತೆ ಜೋರಾಗಿ ಸಿಳ್ಳೆ ಹಾಕಿ ಸಿನಿಮಾದ ಕಾದಲ್ ಪದ ಹಾಡುತ್ತಿದ್ದ. ಆ ಕೂಗಿಗೆ ಮನಸೋತ ಸೆಲ್ವಿಯು ಸೀದ ಸ್ಮಶಾನ ಮೂಲೆಯ ಸ್ನಾನಘಟ್ಟ ತಲುಪುತ್ತಿದ್ದಳು. ಪ್ರೇಮಸಂಗಕ್ಕಾಗಿ ಹಾತೊರೆಯುತ್ತ ವಾಯುವೇಗದಲ್ಲಿ ಸರಿದು ಬರುವಲ್ಲಿ ಯಾರಾದರೂ ತನ್ನ ನೋಡುತ್ತಿರುವರೇ ಎಂಬ ಗೊಡವೆಯೇ ಆಕೆಗೆ ಇರುತ್ತಿರಲಿಲ್ಲ. ಯಾಕೆಂದರೆ, ಅದು ಸ್ಮಶಾನದ ಬಯಲಾಗಿ ಜನರ ಸುಳಿವೇ ಇರಲಿಲ್ಲವಲ್ಲ!

ಚಿನ್ನಪಳನಿ ಕಣ್ಣಾಸೆಲ್ವಿಯ ಪ್ರೇಮವು ಸ್ನಾನಘಟ್ಟದಿಂದ ಬೀದಿಗೆ ಬಂದು, ಅಲ್ಲಿಂದ ಅವರಿವರ ಬಾಯ ಸುದ್ದಿಯಾಗಿ ಅಲ್ಲೇ ಬೀದಿ ಮೇಲಿರುತ್ತಿದ್ದ ಮೇಸ್ತ್ರಿಗೆ ಮತ್ತೆಮತ್ತೆ ಕಿವಿಗೆ ಬಿದ್ದಿತು. ಆಗಲೇ ಚರಂಡಿಯ ಜಾಗ ಬಿಟ್ಟವನು ಮನೆಗೆ ಬಂದು ಹೆಂಡತಿಗೆ ಒದ್ದು, 'ನಿನ್ನ ಸಪೋರ್ಟಿನಿಂದಲೇ ನೀನು ಹೆತ್ತ ಕೊರಂಗು ಹಾಳಾದದ್ದು. ಬೀದಿಯ ಮೇಲೆ ಹತ್ತಾರು ಪೌರ ಕಾರ್ಮಿಕರನ್ನು ಕೈ ಕೆಳಗೆ ಇರಿಸಿಕೊಂಡು ಕೆಲಸ ಮಾಡಿಸುವ ನನ್ನಂಥಾ ಮೇಸ್ತ್ರಿಯ ಸ್ಟ್ಯಾಂಡರ್ಡ್ ಏನು, ಆ ಸ್ಮಶಾನದಲ್ಲಿ ಸತ್ತವರಿಗೆ ಗುಂಡಿ ತೋಡುವವಳ ಮಗಳೊಂದಿಗೆ ಇವನಿಗೆ ಎನ್ನಾ ಸಂಬಂಧಮ್? ಮನೆಯಲ್ಲಿ ಯಾರಿಗಾದರೂ ಅರಿವು ಇರಕ್ಕಾ, ಕಲ್ಯಾಣತುಕ್ಕು ಮೂರು ಕಾಸು ಖರ್ಚು ಮಾಡುವ ಶಕ್ತಿ ಅವರಿಗುಂಟಾ. ಎಲ್ಲಾದರೂ ಮಸಾಣದ ಮನೆಯಲ್ಲಿ ಮದುವೆಯಾಗುವುದಾ? ಬರಲಿ ತೇವಡಿಪ್ಪಯ್ಯ ಮಾಡುತ್ತೇನೆ' ಎಂದು ಮೇಸ್ತ್ರಿ ಮಗನಿಗಾಗಿ ಕಾಯುತ್ತ ಕೂತ.

ಚಿನ್ನಪಳನಿ ಮನೆಯತ್ತ ತಲೆ ಹಾಕಲೇ ಇಲ್ಲ. ಅವನು ಬರದೆ ಇದ್ದಾಗಲೂ ಮೇಸ್ತ್ರಿಗೆ ಇನ್ನಷ್ಟು